# ಮಂಡಲ

ಸುತ್ತಿ ಸುತ್ತಿ ಚಿತ್ತಾರದಲಿ ಅರಳುವುದು
ಭೂಮಂಡಲದ ಸೊಬಗು
ಹಿಂಜಿ ಹರಡಿದ ವಾಯುಮಂಡಲದ ಹರಹು

ಗೋಲವೆಂದರೆ ಒಳಗೊಳ್ಳುತ್ತ ಬೆಳೆಯುವುದು
ಒಂದರೊಳಗೊಂದು ಹೊಸ ಹುಟ್ಟು ಹೊಸೆದು
ಸೇರಿಸುವ ಕಲೆ ಸಿದ್ಧಿಸಿದರೆ
ವೃತ್ತದೊಳಗೊಂದು ವೃತ್ತಾಂತ ಜೀವ ತಳೆದೀತು

ಚುಕ್ಕೆ, ಗೆರೆ, ಗೋಲ, ತ್ರಿಕೋನಗಳು
ದನಿ ಹೊಮ್ಮಿಸಿ ಹಾಡಿಯಾವು
ಹೆಜ್ಜೆಯ ಗೆಜ್ಜೆಗಳು. ನಲಿದಾವು

ಅನಾದಿ ಕಾಲದ ಚಿಹ್ನೆಗಳು
ನರಳಿಕೆ ಮುಗಿಸಿದಂತೆ ಅರಳಿವೆ
ಗೋಲದ ಚುಕ್ಕೆಗಳ ಸಾಲು
ಪರಿಧಿಯ ಹಿಗ್ಗಿಸಿ
ಅಂಗಳವೆಲ್ಲ ಹರಡಿ
ಬಾನಲ್ಲಿ ಸೂರೆಯಾಗಿದೆ

ಗೋಲವಿಲ್ಲಿ ಆದಿ ಅಂತ್ಯಗಳ ಬೆಸೆದ
ನಿರ್ವಿಕಾರ ನಿಜವಾಗಿದೆ
ಒಳಗಣ ಕಿಚ್ಚು ನಂದಾದೀಪವಾಗಿ
ಬಂಧವೇ ಬೆಳಕಿಗೆ ಹಾದಿ ತೆರೆದಿದೆ.





# ಬಳೆಗಳ ನಡುವೆ

ಮುಂಗೈಗೆ ಮೋಹಕ ಬಣ್ಣಗಳ
ಮರದ ಬಳೆಗಳನ್ನು
ಏರಿಸಿದ ಮಗಳ
ಕಿವಿಯ ಎಥ್ನಿಕ್ ಬಾಲಿಗಳು
ನಲಿದಾಡಿದವು

ಒರೆಗಣ್ಣಲ್ಲಿ ನೋಡಿ
ಗಾಜಿನ ಚಿಕ್ಕ ಬಳೆಗಳನ್ನು
ಮುಂಗೈಯಿಂದ ಸರಿಸಿ
ಬಿಗಿ ಮಾಡಿದಳು ಅಮ್ಮ.

ಕಾಲ ಬಳೆಗಳ ನಡುವೆ ನಿಂತಿತು.

**● ನೂತನ ದೋಶೆಟ್ಟಿ**

ಕಲೆ: ಡಿ.ಕೆ. ರಮೇಶ್